Ref.No.36/2022

MW-1,

ದಿನಾಂಕಃ 23-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಬಿ ಎಸ್ ಎಸ್ ಆರ್ ಪ್ರತಿನಿಧಿಯವರಿಂದ

ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನಿಶಾನೆ ಎಂ-6 ದಿನಾಂಕಃ 30-7-1999 ರಂದು ನಡೆದ ವಿಚಾರಣಾ ನಡವಳಿಕೆಯ ಪ್ರತಿ ಎಂದರೆ ನಿಜ. ನಿಶಾನೆ ಎಂ-6 ರ ಮೊದಲನೇ ಪ್ಯಾರಾದಲ್ಲಿ ದುರಾರಿತ್ತ ಅಧಿಕಾರಿಯ ಹೇಳಿಕೆಯನ್ನು ನಮೂದಿಸಲಾಗಿದೆ ಎಂದರೆ ನಿಜ. ನಿಶಾನೆ ಎಂ-7 ಎಂದು ಗುರುತಿಸಲಾಗಿರುವ ದಾಖಲೆಯಲ್ಲಿ ಲಗತ್ತಿಸಿರುವ ವರದಿಗಾರರ ಹೇಳಿಕೆಯನ್ನು ಎಂ-1 ರಿಂದ 4 ಎಂದು ಉಲ್ಲೇಖಿಸಲಾಗಿದೆ ಎಂದರೆ ನಿಜ. ನಿಶಾನೆ ಎಂ-1 ರಿಂದ 4 ಗಳನ್ನು ವಿಚಾರಣಾಧಿಕಾರಿಗಳವರ ಮುಂದೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಎಂ-7 ರಲ್ಲಿ ಅಡಕಗೊಳಿಸಲಾಗಿರುವ ಪ್ರಕರಣ ಸಂಖ್ಯೆ 5573 ರ ಬಗ್ಗೆ ವರದಿಗಾರರಿಗೆ ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ನಿಜ. ನಿಶಾನೆ ಎಂ-8 ಎಂದು ಗುರುತಿಸಲಾಗಿರುವ ದಾಖಲೆಯು ಅಸಲಿ ದಾಖಲೆಯಾಗಿರುತ್ತದೆ. ಎಂ-8 ನ್ನು ಎಷ್ಟನೇ ತಾರೀಖಿಗೆ ನಮ್ಮ ಸಂಸ್ಥೆಗೆ 1 ನೇ ಪಾರ್ಟಿಯವರು ಹಾಜರುಪಡಿಸಿದರು ಎಂದು ದಾಖಲೆ ಇಲ್ಲ. ಯಾವುದೇ ದಾಖಲೆಯನ್ನು ಕೊಡಬೇಕಾದರೆ ಸಂಸ್ಥೆಯಿಂದ ಇಂತಹ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ ಎಂದು ಬರೆದುಕೊಡುತ್ತಾರೆ ಎಂದರೆ ನಿಜ. ನಿಶಾನೆ ಎಂ-8 ರ ಜೊತೆ ಲಗತ್ತೀಕರಿಸಿರುವ ದಾಖಲೆಯನ್ನು ಸೇರಿಸಿ 2 ನೇ ಪಾರ್ಟಿಯವರು ಸೆಕ್ಯೂರಿಟಿ ಇನ್ವೆಸ್ಟಿಗೇಶನ್ಗೆ ಕೊಟ್ಟಿದ್ದರು ಎಂದರೆ ನಿಜ. ಅದನ್ನು ಯಾವ ದಿನಾಂಕದಂದು ಹಾಜರುಪಡಿಸಲಾಗಿತ್ತು ಎಂದು ನಿರ್ಧಿಷ್ಟವಾಗಿ ಹೇಳಿಲ್ಲ ಎಂದರೆ ನಿಜ. ನಿಶಾನೆ ಎಂ-11 ರಂತೆ ವಿಚಾರಣಾಧಿಕಾರಿಯವರು ದಿನಾಂಕಃ6-6-2005 ರಂದು ವರದಿಯನ್ನು ನೀಡಿದ್ದಾರೆ ಎಂದರೆ ನಿಜ. ಸದರಿ ವರದಿಯ 15 ನೇ ಪ್ಯಾರಾದಲ್ಲಿ ನಿಶಾನೆ ಎಂ-4 ಎಂದು ಗುರುತಿಸಲಾಗಿರುವ ವರ್ಗಾವಣೆ ಪ್ರಮಾಣ ಪತ್ರದ ಅಸಲು ಪ್ರತಿ ಲಭ್ಯವಾಗಿಲ್ಲ ಎಂದು ಬರೆದಿದ್ದಾರೆ ಎಂದರೆ ನಿಜ. ನಿಶಾನೆ ಎಂ-4 ರಲ್ಲಿ ಯಾವ ದಿನಾಂಕದಂದು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ನಿರ್ಧಿಷ್ಟವಾಗಿ ತಿಳಿಸಿಲ್ಲ ಎಂದರೆ ನಿಜ. ಆದರೆ ಡಿಸೆಂಬರ್ 2004 ಎಂದು ತಿಳಿಸಿದ್ದಾರೆ. ವಿಚಾರಣಾಧಿಕಾರಿಯವರು ದಾಖಲಾತಿಗಳನ್ನು ಪರಿಶೀಲನೆ ಮಾಡದೆ ಏಕಪಕ್ಷೀಯ ಮತ್ತು ನ್ಯಾಯ ಸಮ್ಮತವಲ್ಲದ ವರದಿಯನ್ನು ನೀಡಿದ್ದಾರೆ ಎಂದರೆ ಸರಿಯಲ್ಲ.

Ref.No.36/2022
MW-1,

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

**(ರುಡೋಲ್ಫ್ ಪಿರೇರಾ),**
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.